**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಧೀಶರ ನ್ಯಾಯಾಲಯ ಯಾದಗಿರಿ.**

**ಸಿಸಿ ನಂ. 92/2018**

**ಪಿ ಡಬ್ಲೂ-3**

**ದಿನಾಂಕಃ 04-07-2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟಿ ಸವಾಲು ಆರೋಪಿ ಪರ ವಕೀಲರು ಶ್ರೀ. ಜಿ. ಬಿ. ಎನ್ ಇವರಿಂದ**

1. ಸದರಿ ಆರೋಪಿತನು ಬಾಗಿಲು ಹೊಡೆದಿರುವ ಬಗ್ಗೆ ಹೇಳಿಕೆಯಲ್ಲಿ ಬರಿಸಿರುತ್ತೇನೆ. ಸದರಿ ಮು.ಮಾ. 1 ರೈತರ ಮನೆಯಲ್ಲಿ ಮತ್ತು ಸಂತೆಯಲ್ಲಿ ಸಿಗುತ್ತದೆ ಎಂದರೆ ಸರಿ. ಆರೋಪಿತನು ಕೊಡಲಿಯಿಂದ ಚಾಸಾಃ 1 ರವರ ಮನೆಗೆ ಹೊಡೆಯದಿದ್ದರು ಚಾಸಾಃ 1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಬಾಗಿಲು ಎರಡು ಹೋಳು ಆಗಿದ ಬಗ್ಗೆ ಪೋಲಿಸರ ಮುಂದೆ ಹೇಳಿರುತ್ತೇನೆ. ಸದರಿ ನಾನು ಹೇಳಿರುವ ಹೇಳಿಕೆಯಲ್ಲಿ ಪೋಲಿಸರ ಮುಂದೆ ಆಗಿರುವುದನ್ನು ಹೇಳಿರುತ್ತೇನೆ. ಸದರಿ ನಾನು ಪೋಲಿಸರ ಮುಂದೆ ಹೇಳಿರುವ ಹೇಳಿಕೆ ಸರಿ ಇರುತ್ತದೆ.

2. ಆರೋಪಿತನು ಚಾಸಾಃ 4 ರವರಿಗೆ ಕೈಗೆ ಮತ್ತು ಗಲ್ಲಕ್ಕೆ, ಕಾಲಿಗೆ ಹೊಡೆದಿರುತ್ತಾನೆ. ಆರೋಪಿತನು ಚಾಸಾಃ 4 ರವರು ಮೊಣಕಾಲಿಗೆ ಹೊಡೆದಿರುತ್ತಾನೆ. ಆರೋಪಿತನು ಎಡಭಾಗದ ಗಲ್ಲಕ್ಕೆ ಚಾಸಾಃ 4 ರವರಿಗೆ ಹೊಡೆದಿರುತ್ತಾನೆ. ಸದರಿ ಘಟನಾ ಸ್ಥಳದಲ್ಲಿ ಆಗಿರುವುದನ್ನು ನನ್ನ ಹೇಳಿಕೆಯಲ್ಲಿ ಬರೆಸಿರುತ್ತೇನೆ. ಸದರಿ ಆರೋಪಿತನು ಚಾಸಾಃ 1 ರವರ ಜೊತೆ ಜಗಳ ಮಾಡದೇ ಇದ್ದರು ಕೂಡ ಹಾಗೂ ಅವರ ಮನೆಯ ಬಾಗಿಲು ಹೊಡೆಯದೆ ಇದ್ದರುಕೂಡ ಚಾಸಾಃ 1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತೀದ್ದೇನೆ ಎಂದರೆ ಸರಿಯಲ್ಲ. ಸದರಿ ನಾನು ಜಗಳ ಗೊತ್ತಾದ ನಂತರ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ ಎಂದರೆ ಸಾಕ್ಷಿಯೂ ಜಗಳವನ್ನು ಬಿಡಿಸಿರುತ್ತೇನೆ ಎಂದು ಹೇಳುತ್ತಾರೆ. ನಾನು ಚಾಸಾಃ 1 ರವರ ಮಾತು ಕೇಳಿ ಜಗಳ ಬಿಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ಚಾಸಾಃ 1 ಮತ್ತು 4 ರವರಿಗೆ ಜೀವದ ಬೆದರಿಕೆ ಹಾಕದಿದ್ದರು ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3 ಚಾಸಾಃ 1 ರವರಿಗೆ ಆರೋಪಿತನು ಮಾನಭಂಗ ಮಾಡಿರುವುದಿಲ್ಲ ಮತ್ತು ಚಾಸಾಃ 4 ರವರಿಗೆ ಹೊಡೆದಿರುವುದಿಲ್ಲ ಆದರೆ ನಾನು ಚಾಸಾಃ 1 ರವರು ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾಃ 1 ರವರ ಮನೆಯ ಬಾಗಿಲು ಆರೋಪಿತನು ಹೊಡೆದು 10,000/- ನುಕ್ಸಾನ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾಃ 4 ರವರಿಗೆ ಆರೋಪಿತನು ಹೊಡೆದಾಗ ರಕ್ತ ಗಾಯವಾಗಿರುವುದಿಲ್ಲ, ಸದರಿ ಗುಪ್ತಗಾಯವಾಗಿರುವುದರ ಬಗ್ಗೆ ಚಾಸಾಃ 4 ರವರು ಆಸ್ಪತ್ರೆಗೆ ಹೋಗಿರುವುದರ ಬಗ್ಗೆ ನನಗೆ ಮಾಹಿತಿ ಇಲ್ಲ. ಚಾಸಾಃ 4 ರವರಿಗೆ ಗುಪ್ತಗಾಯವಾಗಿರದಿದ್ದರು ಕೂಡ ಚಾಸಾಃ 1 ಮತ್ತು 4 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಚಾಸಾಃ 4 ರವರು ಆರೋಪಿತನ ಹೆಂಡತಿ ಜೊತೆ ಸಲಿಗೆಯಿಂದ ಮಾತನಾಡುವುದು ತೊಂದರೆ ಕೊಡುವುದು ಮಾಡುತ್ತಿದ್ದ ಎಂದರೆ ಸಾಕ್ಷಿಯೂ ಸದರಿ ಆರೋಪಿತನಿಗೆ ಚಾಸಾಃ 4 ರವರ ಮೇಲೆ ಸಂಶಯವಿತ್ತು.

4. ಸದರಿ ವಿಷಯದ ಬಗ್ಗೆ ತಾಂಡದಲ್ಲಿ ನ್ಯಾಯಾಪಂಚಾಯಿತಿ ಆಗಿರುತ್ತದೆ ಎಂದರೆ ಸಾಕ್ಷಿಯೂ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಷಯವೂ ನನಗೆ ಗೊತ್ತಿದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ನನಗೆ ಮತ್ತು ಆರೋಪಿತನ ನಡುವೆ ಒಳ್ಳೆಯ ಸಂಬಂಧವಿದೆ, ಚಾಸಾಃ 1 ರವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು ಯಾದಗಿರಿ**